ಪಾಠ 10

# ನಿಮ್ಮ ಹೊಸ ಬಿಡುಗಡೆ



**ಈ ಪಾಠದಲ್ಲಿ ನೀವು ಕಲಿಯುವ ಅಂಶಗಳು**

ಪಾಪದಿಂದ ಬಿಡುಗಡೆ
ಭಯದಿಂದ ಬಿಡುಗಡೆ
ತಪ್ಪಿನಿಂದ ಬಿಡುಗಡೆ
ಮೋಶೆಯ ಕಟ್ಟಳೆಯಿಂದ ಬಿಡುಗಡೆ
ಚಿಂತೆಗಳಿಂದ ಬಿಡುಗಡೆ
ಕಾಯಿಲೆಯಿಂದ ಬಿಡುಗಡೆ
ಭವಿಷ್ಯತ್ತಿನಲ್ಲಿ ಬಿಡುಗಡೆ
ನಿಮ್ಮ ಬಿಡುಗಡೆಯನ್ನು ಉಳಿಸಿಕೊಳ್ಳುವುದು

ಅಪೋಸ್ತಲನಾದ ಪೌಲನು ದೇವರ ಮಕ್ಕಳ ಅದ್ಭುತವಾದ ಬಿಡುಗಡೆಯ ಕುರಿತು ಈ ರೀತಿಯಾಗಿ ಬರೆಯುತ್ತಾನೆ. ಕರ್ತನ ಮಾರ್ಗದಲ್ಲಿ ಇನ್ನೂ ಮುಂದೆ ನೀವು ಹೋಗುವುದಾದರೆ ನೀವು ಆತನು ಕೊಡುವ ಆಶ್ಚರ್ಯಕರವಾದ ಬಿಡುಗಡೆಯನ್ನು ಹೆಚ್ಚಾಗಿ ಗೌರವಿಸುವಿರಿ ಮತ್ತು ಆನಂದಿಸುವಿರಿ.

## ಪಾಪದಿಂದ ಬಿಡುಗಡೆ

ಯೇಸು ಕ್ರಿಸ್ತನು ನಿಮ್ಮನ್ನು ಅಪರಾಧ, ಶಿಕ್ಷೆ, ಅಧಿಕಾರ ಮತ್ತು ಪಾಪದ ಸಾನಿಧ್ಯದಿಂದ ಬಿಡುಗಡೆ ಮಾಡಲು ಸತ್ತನು.



* ಅಪರಾಧ : ನೀವು ಮಾಡಿದ ಎಲ್ಲಾ ತಪ್ಪುಗಳಿಗಾಗಿ ಆತನು ಅಪವಾದ ಹೊತ್ತುಕೊಂಡನು.

* ಶಿಕ್ಷೆ: ನೀವು ಸಾಯಲು ಶಿಕ್ಷೆ ವಿಧಿಸಲ್ಪಟ್ಟಿದ್ದಿರಿ, ಆದರೆ ಯೇಸು ನಿನ್ನ ಸ್ಥಳದಲ್ಲಿ ಸತ್ತನು, ಆತನು ನಿಮ್ಮ ರಕ್ಷಕನನ್ನಾಗಿ ಅಂಗೀಕರಿಸಿರುವುದರಿಂದ ನೀವು ಮರಣಶಿಕ್ಷೆಯಿಂದ ಪಾರಾಗುವಿರಿ.

* ಅಧಿಕಾರ: ಯೇಸು ಸೈತಾನನ್ನು ಜಯಿಸಿ ನಿಮ್ಮ ಮೇಲಿರುವ ಪಾಪದ ಅಧಿಕಾರವನ್ನು ಮುರಿದುಬಿಟ್ಟನು.

ರೋಮಾಪುರದವರಿಗೆ 6:22, 7:11, 8:1 ಈಗಲಾದರೂ ನೀವು ಪಾಪದಿಂದ ಬಿಡುಗಡೆಯನ್ನು ಹೊಂದಿದ್ದಿರಿ.... ಯಾಕೆಂದರೆ ಸತ್ತವನು ಪಾಪದಿಂದ ವಶದಿಂದ ಬಿಡುಗಡೆಯನ್ನು ಹೊಂದಿದ್ದಾನಷ್ಟೇ ಅದೇ ಪ್ರಕಾರ ನೀವು ಸಹ ನಿಮ್ಮನ್ನು ಕ್ರಿಸ್ತ ಯೇಸುವಿನ ಐಕ್ಯದಿಂದ ಪಾಪದ ಪಾಲಿಗೆ ಸತ್ತವರೂ ದೇವರಿಗಾಗಿ ಜೀವಿಸುವವರೂ ಎಂದು ಎಣಿಸಿಕೊಳ್ಳಿರಿ. ಆದುದ್ದರಿಂದ ಕ್ರಿಸ್ತ ಯೇಸುವಿನಲ್ಲಿರುವವರಿಗೆ ಅಪರಾಧ ನಿರ್ಣಯವು ಈಗ ಇಲ್ಲವೇ ಇಲ್ಲ.

## ನೀವು ಮಾಡಬೇಕಾದದ್ದು

1. ನೀವು ಅಪರಾಧ, ಶಿಕ್ಷೆ ಮತ್ತು ಪಾಪದ ಹಿಡಿತದಿಂದ ಬಿಡುಗಡೆ ಹೊಂದಿದ್ದೀರಿ.

   ...ಅ) ಯೇಸುವನ್ನು ನಿಮ್ಮ ರಕ್ಷಕನನ್ನಾಗಿ ಅಂಗೀಕರಿಸುವುದರಿಂದ

   ...ಆ) ನಿಮ್ಮ ಪಾಪಗಳಿಗಾಗಿ ತಪಸ್ಸು ಮಾಡುವುದರಿಂದ

   ...ಇ) ಈಗಿನಿಂದ ಒಳ್ಳೇಯವರಾಗಲು ಪ್ರಯತ್ನಿಸುವುದರಿಂದ

ಉತ್ತರ: 1 ಅ) ಯೇಸುವನ್ನು ನಿಮ್ಮ ರಕ್ಷಕನನ್ನಾಗಿ ಅಂಗೀಕರಿಸುವುದರಿಂದ

* ಪಾಪಕ್ಕಿರುವ ಆಕರ್ಷಣೆ: ಕೆಲವು ಜನರು ಯೇಸುಕ್ರಿಸ್ತನನ್ನು ಅಂಗೀಕರಿಸಿದ ಕ್ಷಣದಿಂದಲೇ ತಮ್ಮ ದುರಾಭ್ಯಾಸಗಳಿಂದ ವಿಮುಕ್ತರಾಗುತ್ತಾರೆ. ಕೆಲವರು ವಾರಾನುಗಟ್ಟಲೆ ತಂಬಾಕು, ಮಾದಕ ವಸ್ತುಗಳು ಅಥವಾ ಇತರ ದುರ್ಗುಣಗಳ ಬಯಕೆಗಳಿಂದ ಬಿಡಿಸಿಕೊಳ್ಳಲು ಬಹಳ ಹೋರಾಡಬೇಕಾಗುತ್ತದೆ. ಆದರೆ ಅವರು ನಂಬಿಕೆಯಿಂದ ಪ್ರಾರ್ಥನೆ ಮಾಡುತ್ತಾ ಮುಂದುವರಿದರೆ, ದೇವರು ಇವರಿಗೆ ಜಯವನ್ನು ಕೊಡುವನು.

ಯೋಹಾನ 8:36 ಮಗನು ನಿಮ್ಮನ್ನು ಬಿಡುಗಡೆ ಮಾಡಿದರೆ, ನಿಜವಾಗಿ ನಿಮಗೆ ಬಿಡುಗಡೆಯಾಗುವುದು.

ಯಾಕೋಬ 4:7 ಸೈತಾನನ್ನು ಎದುರಿಸಿರಿ, ಅವನು ನಿಮ್ಮನ್ನು ಬಿಟ್ಟು ಓಡಿ ಹೋಗುವನು.

ನಿಮಗೆ ಇನ್ನೂ ಕೆಟ್ಟ ಅಭ್ಯಾಸಗಳ ವಿರುದ್ಧ ಹೋರಾಟವಿರುವುದಾಗಿದ್ದರೆ, ಅದನ್ನು ಬಿಟ್ಟುಬಿಡಬೇಡಿ. ಸೈತಾನನು ನಿಮ್ಮನ್ನು ಮರುಳುಗೊಳಿಸಿದಾಗ ಕ್ರಿಸ್ತನು ಕೊಡುವ ಬಿಡುಗಡೆಯನ್ನು ನಂಬಿಕೆಯಿಂದ ಪಡೆಯಿರಿ. ಕರ್ತನು ಕೊಟ್ಟಿರುವ ಬಿಡುಗಡೆಗಾಗಿ ಆತನನ್ನು ಕೊಂಡಾಡುವಿರಿ, ಆಗ ನೀವು ಮರಳುಗೊಳಿಸುವಾತನ ಮೇಲೆ ಜಯಹೊಂದುವಿರಿ. ಸಭಾಪಾಲಕರು ನಿಮ್ಮೊಂದಿಗೆ ಪ್ರಾರ್ಥನೆ ಮಾಡಲು ಮತ್ತು ನಿಮಗೆ ಸಹಾಯ ಮಾಡಲು ಸಂತೋಷಪಡುವರು.

ನೀವು ಇನ್ನು ಅನೇಕ ವಿಧದ ಆಕರ್ಷಣೆಯ ವಿರುದ್ಧ ಹೋರಾಡಬೇಕು. ಆದರೆ ನೀವು ಪರಲೋಕಕ್ಕೆ ಹೋದಾಗ ನೀವು ಪಾಪದ ಆಕರ್ಷಣೆಯಿಂದ ಸಂಪೂರ್ಣವಾಗಿ ಬಿಡುಗಡೆ ಹೊಂದುವಿರಿ.

## ನೀವು ಮಾಡಬೇಕಾದದ್ದು

2. ಯೋಹಾನ 8:36 ಮತ್ತು ಯಾಕೋಬ 4:7ನ್ನು ಬಾಯಿಪಾಠ ಮಾಡಿರಿ.
3. (ಒಂದನ್ನು ಬರೆಯಿರಿ) ಸತ್ಯವೇದವು ಸೈತಾನನ ಕುರಿತು ಹೇಳುವುದೇನೆಂದರೆ

...ಅ) ನೀವು ಅವನನ್ನು ವಿರೋಧಿಸಿದರೆ ನಿಮ್ಮನ್ನು ಸೋಲಿಸುತ್ತಾನೆಂದು

...ಆ) ನೀವು ಅವನನ್ನು ವಿರೋಧಿಸಿದರೆ ನಿಮ್ಮಿಂದ ಓಡಿ ಹೋಗುತ್ತಾನೆಂದು

ಇ) ನಿಮ್ಮ ವಿರೋಧತ್ವಕ್ಕೆ ಯಾವ ಒಂದು ಬೆಲೆಯನ್ನು ಕೊಡುವುದಿಲ್ಲ.

**ಉತ್ತರ** : 3.ಆ) ನೀವು ಅವನನ್ನು ವಿರೋಧಿಸಿದರೆ ನಿಮ್ಮಿಂದ ಓಡಿಹೋಗುತ್ತಾನೆಂದು

* * * *

ಪಾಪದ ಇರುವಿಕೆ ಮತ್ತು ಅದರ ಪರಿಣಾಮಗಳು: ನಾವು ಈಗ ನಮ್ಮ ಸುತ್ತಲೂ ಪಾಪ ಮತ್ತು ಅದರಿಂದ ಉಂಟಾಗುವ ಪರಿಣಾಮಗಳನ್ನು ನೋಡುತ್ತೇವೆ-ವೇದನೆ, ದುಃಖ ಮತ್ತು ಸಾವು. ಒಂದು ದಿವ್ಯವಾದ ದಿನ ನಾವು ನಮ್ಮ ಶಾಶ್ವತವಾದ ಮನೆಗೆ ಹೋಗುತ್ತೇವೆ ಮತ್ತು ಪಾಪದಿಂದ ಮತ್ತು ಅದರ ಪರಿಣಾಮಗಳ ನೆನಪಿನಿಂದ ವಿಮುಕ್ತರಾಗುತ್ತೇವೆ.

**ನೀವು ಮಾಡಬೇಕಾದದ್ದು**

4. (ಮೂರನ್ನು ಬರೆಯಿರಿ) ಈಗ ಕ್ರಿಸ್ತನಲ್ಲಿ ನಮಗೆ ಪಾಪದ ಯಾವ ಭಾಗದಿಂದ ಬಿಡುಗಡೆ ಸಿಕ್ಕುತ್ತದೆ?

...ಅ) ಶೋಧನೆ ಉಂಟಾಗುವುದರಿಂದ ಬಿಡುಗಡೆ

...ಆ) ಪಾಪದ ಅಪರಾಧದಿಂದ ಬಿಡುಗಡೆ

...ಇ) ಪಾಪದಿಂದುಂಟಾಗುವ ಎಲ್ಲಾ ಪರಿಣಾಮಗಳಿಂದ ಬಿಡುಗಡೆ

...ಈ) ಪಾಪದ ಹಿಡಿತದಿಂದ ಬಿಡುಗಡೆ

...ಉ) ಪಾಪದ ಇರುವಿಕೆಯಿಂದ ಬಿಡುಗಡೆ

...ಊ) ಪಾಪದ ಶಿಕ್ಷೆಯಿಂದ ಬಿಡುಗಡೆ

**ಉತ್ತರಗಳು**: 4.ಆ) ಪಾಪದ ಅಪರಾಧದಿಂದ ಬಿಡುಗಡೆ ಈ) ಪಾಪದ ಹಿಡಿತದಿಂದ ಬಿಡುಗಡೆ ಊ) ಪಾಪದ ಶಿಕ್ಷೆಯಿಂದ ಬಿಡುಗಡೆ

ಇತರರು ನಿಮಗೆ ಏನಾದರೂ ಮಾಡುತ್ತಾರೋ ಎಂಬ ಭಯದಿಂದ ನೀವು ಬಿಡುಗಡೆ ಹೊಂದಿದ್ದೀರಿ. ನಿಮ್ಮ ಜೀವಿತವು ದೇವರ ಆಶ್ರಯದಲ್ಲಿದೆ, "ಕ್ರಿಸ್ತನ ಮೂಲಕ ದೇವರಲ್ಲಿ ಅಡಗಿಸಲ್ಪಟ್ಟಿದೆ" ನೀವು ಕ್ರಿಸ್ತನಿಗೋಸ್ಕರ ಶ್ರಮೆಯನ್ನು ಅನುಭವಿಸಬೇಕಾಗುತ್ತದೆ, ಅಥವಾ ಸಾಯಬೇಕಾಗುತ್ತದೆ, ಆದರೆ ಆತನ ಪ್ರತಿಕ್ಷಣವು ನಿಮ್ಮೊಂದಿಗೆ ಇರುವನು, ಆತನ ಅಪ್ಪಣೆಯಿಲ್ಲದೆ ನಿಮಗೆ ಏನೂ ಸಂಭವಿಸುವುದಿಲ್ಲ.

ರೋಮಾಪುರದವರಿಗೆ 8:31 ದೇವರು ನಮ್ಮ ಕಡೆ ಇದ್ದರೆ, ನಮ್ಮನ್ನು ಎದುರಿಸುವವರು ಯಾರು?

ನೀವು ಮಾಟ ಮಾಂತ್ರ, ಕೇಡಿನಕಣ್ಣು ಮತ್ತು ದುರಾದೃಷ್ಟವನ್ನು ತರುವ ಸಂಗತಿಗಳ ಭಯದಿಂದ ಬಿಡುಗಡೆ ಹೊಂದಿದ್ದೀರಿ. ಜೀವವುಳ್ಳ ಕ್ರಿಸ್ತನು ನಿಮ್ಮ ಪಕ್ಕದಲ್ಲಿದ್ದುಕೊಂಡು ನಿಮ್ಮನ್ನು ಕಾಪಾಡುತ್ತಿರುವಾಗ, ನೀವು ಪದಕಗಳನ್ನು, ಮಂತ್ರ, ವಸ್ತುಪೂಜೆ, ತಾಯಿತಗಳು, ಒಂದು ಗ್ಲಾಸಿನಲ್ಲಿ ನೀರನ್ನು ಹಾಕಿ ಚಿತ್ರಪಟದ ಮುಂದಿಡುವುದು, ನಿಮ್ಮ ಮಗುವಿನ ಮಣಿಕಟ್ಟಿನಲ್ಲಿ ಅಥವಾ ಕತ್ತಿನಲ್ಲಿ ತಾಯಿತ ಕಟ್ಟುವುದು, ನಿಮ್ಮನ್ನು ಕಾಪಾಡುವ ದೇವದೂತನ ಚಿತ್ರಪಟ ಅಥವಾ ನಿಮ್ಮನ್ನು ರಕ್ಷಿಸಲು ಇನ್ನಾವುದಾದರೂ ಚಿತ್ರಪಟಗಳನ್ನು ಅಥವಾ ಮೂರ್ತಿಗಳನ್ನು ನೀವು ಉಪಯೋಗಿಸಬೇಕಾದದ್ದಿಲ್ಲ. ಆದರೆ, ನೀವು ಹೀಗೆ ಈ ವಸ್ತುಗಳನ್ನು ಉಪಯೋಗಿಸುವುದರಿಂದ ಕರ್ತನಿಗೆ ಬಹಳ ವ್ಯಸನವಾಗುತ್ತದೆ. ಯಾಕಂದರೆ ಆತನು ನಿಮ್ಮನ್ನು ರಕ್ಷಿಸುತ್ತೇನೆಂದು ಕೊಟ್ಟ ಭರವಸೆಯನ್ನು ಉಳಿಸಿಕೊಳ್ಳದಂತೆ ಆಗುತ್ತದೆ.

> ಇಬ್ರಿಯರಿಗೆ **13:5,6** "ನಾನು ನಿನ್ನನ್ನು ಎಂದಿಗೂ ಕೈಬಿಡುವುದಿಲ್ಲ, ಎಂದಿಗೂ ತೊರೆಯುವುದಿಲ್ಲ"ವೆಂದು ದೇವರು ತಾನೇ ಹೇಳಿದ್ದಾನೆ. ಆದುದರಿಂದ "ಕರ್ತನು ನನ್ನ ಸಹಾಯಕನು, ಭಯಪಡೆನು, ಮನುಷ್ಯನು ನನಗೆ ಏನು ಮಾಡಾನು?" ಎಂದು ನಾವು ಧೈರ್ಯವಾಗಿ ಹೇಳಬಲ್ಲೆವು.

**ಯೋಹಾನ** 4:4 ಲೋಕದಲ್ಲಿರುವವನಿಗಿಂತ ನಿಮ್ಮಲ್ಲಿರುವಾತನು ಹೆಚ್ಚಿನವನಾಗಿರುವನು.

5. ಭಯದಿಂದ ಬಿಡುಗಡೆ ಹೊಂದಲು ಇರುವ ಉತ್ತಮ ಮಾರ್ಗವು

...ಅ) ಬಲವಾದ ಮಂತ್ರವನ್ನು ಉಪಯೋಗಿಸುವುದರಿಂದ

...ಆ) ಮಂತ್ರವಾದಿಯ ಹತ್ತಿರ ಹೋಗುವುದರಿಂದ

...ಇ) ಮೂರ್ತಿಗಳ ಎದುರು ಮೇಣದ ಬತ್ತಿಯನ್ನು ಉರಿಸುವುದರಿಂದ

...ಈ) ಕರ್ತನಲ್ಲಿ ನಂಬಿಕೆಯಿಡುವುದರಿಂದ

**ಉತ್ತರ** : 5 ಈ) ಕರ್ತನಲ್ಲಿ ನಂಬಿಕೆಯಿಡುವುದರಿಂದ

## ತಪ್ಪಿನಿಂದ ಬಿಡುಗಡೆ

ಸೈತಾನನು ಮಿಲಿಯಾಂತರ ಜನರನ್ನು ಸುಳ್ಳು ಧರ್ಮಗಳಲ್ಲಿ ಸಿಕ್ಕಿ ಹಾಕಿದ್ದಾನೆ. ಆತನು ಅವರಿಗೆ ಪರಲೋಕಕ್ಕೆ ಹೋಗುವುದು ಹೇಗೆ ಎಂಬುವುದರ ವಿಷಯದಲ್ಲಿ ತಪ್ಪಾದ ಅಭಿಪ್ರಾಯಗಳನ್ನು ಕೊಡುತ್ತಾನೆ. ಅವರು ಸೂರ್ಯ ಮತ್ತು ಚಂದ್ರ, ಕಲ್ಲು, ನದಿಗಳನ್ನು ಮತ್ತು ಮರಗಳನ್ನು ಪೂಜಿಸುತ್ತಾರೆ ಮತ್ತು ಕನಸಿನ ಅರ್ಥಗಳನ್ನು ಕಂಡು ಹಿಡಿಯಲು ಪ್ರಯತ್ನಿಸುತ್ತಾರೆ. ಅವರು ಸತ್ತವರ ಆತ್ಮಗಳೊಂದಿಗೆ ತಮಗೆ ಸಹಾಯ ಮಾಡಲು ಕೇಳಿಕೊಳ್ಳುತ್ತಾರೆ. ಅವರು ಚಿನ್ನ, ಬೆಳ್ಳಿ, ಕಟ್ಟಿಗೆ, ಕಲ್ಲು, ಅಥವಾ ಗಾರೆಗಳಿಂದ ಮಾಡಿದ ಮೂರ್ತಿಗಳಿಗೆ ಮೇಣದ ಬತ್ತಿ ಮತ್ತು ಧೂಪಗಳನ್ನು ಉರಿಸುತ್ತಾರೆ. ಅವರು ತಮಗೆ ಸಹಾಯ ಮಾಡಲು ಸತ್ತವರ ಆತ್ಮಗಳೊಂದಿಗೆ ಸಂಪರ್ಕಿಸುವಾಗ ಬಲಿಗಳನ್ನು ಮತ್ತು ಹರಕೆಗಳನ್ನು ಅರ್ಪಿಸುತ್ತಾರೆ.

ದೇವವ ವಾಕ್ಯ - ಮನುಷ್ಯರ ಕಲ್ಪನೆ ಅಲ್ಲ - ಸ್ವರ್ಗಲೋಕಕ್ಕೆ ಹೋಗುವ ಸರಿಯಾದ ದಾರಿಯನ್ನು ತೋರಿಸುತ್ತದೆ. ನೀವು ದೇವರ ವಾಕ್ಯವನ್ನು ಓದುತ್ತಿರುವಾಗ, ನೀವು ಸತ್ಯವನ್ನು ಕಂಡು ಹಿಡಿಯುತ್ತೀರಿ ಮತ್ತು ಇಂಥ ತಪ್ಪುಗಳಿಂದ ಬಿಡುಗಡೆ ಹೊಂದುವಿರಿ.

**ಯೋಹಾನ 8:32** ನೀವು ಸತ್ಯವನ್ನು ತಿಳಿದುಕೊಳ್ಳುವಿರಿ. ಮತ್ತು ಸತ್ಯವು ನಿಮ್ಮನ್ನು ಬಿಡುಗಡೆ ಮಾಡುವುದು.

## ನೀವು ಮಾಡಬೇಕಾದದ್ದು

6. (ಒಂದನ್ನು ಬರೆಯಿರಿ) ನಾವು ತಪ್ಪಿನಿಂದ ಬಿಡುಗಡೆ ಹೊಂದಿದ್ದೇವೆ

...ಅ) ಕನಸಿನ ಅರ್ಥವನ್ನು ಹೊಂದಿದಾಗ

...ಆ) ಸ್ವರ್ಗಲೋಕದ ಬಗ್ಗೆ ಇತರ ಜನರ ಅಭಿಪ್ರಾಯ ಹೊಂದಿದದಾಗ

...ಇ) ಸತ್ಯವೇದದಲ್ಲಿ ಕಲಿತ ಸತ್ಯಗಳಿಂದ

**ಉತ್ತರ** : 6. ಇ) ಸತ್ಯವೇದದಲ್ಲಿ ಕಲಿತ ಸತ್ಯಗಳಿಂದ

ಸತ್ಯವೇದದಲ್ಲಿರುವ ಈ ಕೆಳಗಿನ ವಚನಗಳಲ್ಲಿ ನಾವು ಈ ರೀತಿಯಾಗಿ ಕಾಣುತ್ತೇವೆ: ದೇವರು ಮೂರ್ತಿಗಳನ್ನು ಮತ್ತು ಸತ್ತವರ ಆತ್ಮಗಳೊಂದಿಗೆ ಸಂಪರ್ಕಿಸುವುದನ್ನು ಬಹಳವಾಗಿ ವಿರೋಧಿಸುತ್ತಾನೆ. ನಾವು ಆತನಿಗೆ ನಮ್ಮ ಜೀವಿತವನ್ನು ಒಪ್ಪಿಸಿಕೊಟ್ಟಿದ್ದರೆ, ನಾವು ಉತ್ತಮವಾದದ್ದನ್ನು ತಿಳಿಯುವ ಮೊದಲೇ ಮಾಡಿದ ಎಲ್ಲಾ ತಪ್ಪು ಹರಕೆಗಳಿಗಿಂತ ಆತನ ಅಪ್ಪಣೆಗಳು ಹೆಚ್ಚು ಮಹತ್ವವುಳ್ಳದ್ದಾಗಿವೆ. ನಾವು ಯಾವುದಾದರೂ ಮೂರ್ತಿಗಳಿಗೆ, ಸತ್ತವರ ಆತ್ಮಗಳಿಗೆ, ಅಥವಾ ಸುಳ್ಳು ದೇವರಿಗೆ ಕೊಟ್ಟ ಎಲ್ಲಾ ವಚನಗಳಗಿಂತ ದೇವರಿಂದ ಬಂದಂತ ಈ ಅಪ್ಪಣೆಗಳು ನಮ್ಮನ್ನು ಬಿಡುಗಡೆ ಮಾಡುತ್ತವೆ.

> ವಿಮೋಚನಕಾಂಡ 20:3,5 ನಾನಲ್ಲದೆ ನಿನಗೆ ಬೇರೆ ದೇವರುಗಳು ಇರಬಾರದು. ಯಾವ ಮೂರ್ತಿಯನ್ನು ಮಾಡಿಕೊಳ್ಳಬಾರದು. ಆಕಾಶದಲ್ಲಾಗಲಿ, ಭೂಮಿಯಲ್ಲಾಗಲಿ, ಭೂಮಿಯ ಕೆಳಗಿನ ನೀರಿನಲ್ಲಾಗಲಿ, ಇರುವ ಯಾವುದರ ರೂಪವನ್ನು ಮಾಡಿಕೊಳ್ಳಬಾರದು. ಅವುಗಳಿಗೆ ಅಡ್ಡ ಬೀಳಲೂ ಬಾರದು ಪೂಜೆ ಮಾಡಲು ಬಾರದು.

> ಧರ್ಮೋಪದೇಶಕಾಂಡ 18:10-12 ಮಕ್ಕಳನ್ನು ಆಹುತಿ ಕೊಡುವವರು, ಕಣಿ ಹೇಳುವವರು, ಶಕುನನೋಡುವವರು, ಯಂತ್ರ ಮಂತ್ರಗಳನ್ನು

ಮಾಡುವವರು, ಮಾಟಗಾರರು, ತಂತ್ರಗಾರರು, ಸತ್ತವರನ್ನು ವಿಚಾರಿಸುವರು, ಬೇತಾಳಕರು, ಪ್ರೇತಸಿದ್ಧರು, ಇಂಥವರು ಯಾರೂ ನಿಮ್ಮಲ್ಲಿ ಇರಬಾರದು. ಇಂಥ ಕೆಲಸಗಳನ್ನು ನಡಿಸುವವರು ಯೆಹೋವನಿಗೆ ಅಸಹ್ಯರಾಗಿದ್ದಾರೆ. ನಿಮ್ಮ ದೇವರಾದ ಯೆಹೋವನು ಇಂಥ ಹೇಯಕೃತ್ಯಗಳನ್ನು ಮಾಡುವ ಆ ಜನಾಂಗಗಳನ್ನು ನಿಮ್ಮೆದುರಿನಿಂದ ಹೊರಡಿಸಿಬಿಡುತ್ತಾನಲ್ಲಾ.

ಈಗ ನೀವು ಸತ್ತವರ ಆತ್ಮಗಳಿಗೆ ಮತ್ತು ಸುಳ್ಳು ದೇವರುಗಳಿಗೆ ಸೇವೆ ಮಾಡುವುದರಿಂದ ಬಿಡುಗಡೆ ಹೊಂದಿದ್ದೀರಿ. ಯಾಕಂದರೆ ಈಗ ನೀವು ನಿಜವಾದ ಒಬ್ಬನೇ ದೇವರಿಗೆ ಸೇರಿರುವಿರಿ. ನೀವು ದುರಾತ್ಮಗಳ ಹಿಡಿತದಿಂದ ಮತ್ತು ಅವುಗಳು ನಿಮಗೆ ಏನಾದರೂ ಮಾಡುತ್ತಿವೆಯೋ ಎಂಬುದರ ಭಯದಿಂದ ಬಿಡುಗಡೆ ಹೊಂದಿದ್ದೀರಿ. ನಿಮ್ಮ ಹೃದಯದಲ್ಲಿ ವಾಸಿಸಲು ಬಂದಂತೆ ದೇವರ ಪವಿತ್ರಾತ್ಮನು ನಿಮ್ಮನ್ನು ಕಾಡಿಸಲು ಬರುವ ಯಾವುದೇ ದುರಾತ್ಮಗಳಿಗಿಂತಲೂ ಬಹಳ ಬಲಶಾಲಿಯಾಗಿದ್ದಾನೆ.

## ನೀವು ಮಾಡಬೇಕಾದದ್ದು

7. (ಎರಡನ್ನು ಬರೆಯಿರಿ) ಸತ್ಯವೇದವು ನಮ್ಮನ್ನು ಈ ತಪ್ಪಿನಿಂದ ಬಿಡುಗಡೆ ಮಾಡುತ್ತದೆ.

...ಅ) ಮೂರ್ತಿ ಪೂಜೆ

...ಆ) ದೇವರಿಗಾಗಿ ನೇರವಾಗಿ ಪ್ರಾರ್ಥಿಸುವುದರಿಂದ

...ಇ) ಒಂದು ದಿನವನ್ನು ವಿಶ್ರಾಂತಿಗಾಗಿ ಇಡುವುದು

...ಈ) ಪಶ್ಚಾತ್ತಾಪ ಮತ್ತು ನಂಬಿಕೆ.

...ಉ) ಸತ್ತವರ ಆತ್ಮಗಳೊಂದಿಗೆ ಸಂಪರ್ಕಿಸುವುದು

**ಉತ್ತರ:** 7.ಅ) ಮೂರ್ತಿ ಪೂಜೆ ಉ) ಸತ್ತವರ ಆತ್ಮಗಳೊಂದಿಗೆ ಸಂಪರ್ಕಿಸುವುದು

## ಮೋಶೆಯ ಕಟ್ಟಳೆಯಿಂದ ಬಿಡುಗಡೆ

ಅನೇಕ ವರ್ಷಗಳ ಹಿಂದೆ ದೇವರು ಇಬ್ರಿಯರೊಂದಿಗೆ ಒಂದು ಒಡಂಬಡಿಕೆಯನ್ನು ಮಾಡಿದನು. ಮೋಶೆಯು ಈ ಒಡಂಬಡಿಕೆಯ ಕರಾರುಗಳನ್ನು ಮತ್ತು ಅದರ ಎಲ್ಲಾ ಕಟ್ಟಳೆಗಳು ಮತ್ತು ಕಾನೂನುಗಳನ್ನು ತಾನು ಐಗುಪ್ತದಿಂದ ಕರೆತಂದ ಹೊಸ ಜನಾಂಗಕ್ಕೋಸ್ಕರ ಅಂಗೀಕರಿಸಿದನು. ಈ ಮೋಶೆಯ ಕಟ್ಟಳೆಗಳು ಯಜ್ಞ ಅರ್ಪಿಸುವುದು ಹೇಗೆ, ಪವಿತ್ರ ದಿನಗಳು, ಆರಾಧಿಸುವ ಕ್ರಮಗಳು, ಮತ್ತು ಆಹಾರದ ವಿಷಯದಲ್ಲಿ ಕಾನೂನುಗಳನ್ನು ಒಳಗೊಂಡಿದೆ.

ಈ ಎಲ್ಲಾ ದೈವಿಕ ಕಾನೂನುಗಳು ಯೇಸು ಕ್ರಿಸ್ತನು ಮತ್ತು ಆತನು ಒದಗಿಸುವ ನಿತ್ಯಜೀವನದ ಒಂದು ಚಿತ್ರಪಟದ ರೀತಿಯಲ್ಲಿದೆ. ಆತನು ಅವರ ಪಾಪಗಳನ್ನು ತೆಗೆದುಹಾಕುವ ಸರಿಯಾದ ಯಜ್ಞವಾಗಿರುವನು. ಯಾರ್‍ಯಾರು ಆತನನ್ನು ರಕ್ಷಕನನ್ನಾಗಿ ಅಂಗೀಕರಿಸುವರೋ, ಇಬ್ರಿಯರ ಮತ್ತು ಇತರರಿಗಾಗಿ ಸಹ ಆತನು ಕಟ್ಟಳೆಯನ್ನು ಪೂರೈಸಲು ಮಾಡಬೇಕಾದದ್ದನ್ನು ಎಲ್ಲಾ ಮಾಡುವನು ಮತ್ತು ಒಂದು ಹೊಸ ಒಡಂಬಡಿಕೆಯನ್ನು ಸ್ಥಾಪಿಸುವನು.

ಆದುದರಿಂದ ಮೋಶೆಯ ಕಾಲದಿಂದ ಕ್ರಿಸ್ತನ ಕಾಲದವರೆಗೆ ಮೋಶೆಯ ಕಟ್ಟಳೆಗಳ ನಿಯಮಗಳು ಇಬ್ರಿಯರಿಗಾಗಿ ಇದ್ದವು. ಅಂದಿನಿಂದ, ನಾವು ಹೊಸ ಒಪ್ಪಂದದ ಅವಧಿಯಲ್ಲಿದ್ದೇವೆ, ಅದು ಹೊಸ ಒಡಂಬಡಿಕೆ.

### ನೀವು ಮಾಡಬೇಕಾದದ್ದು

8. (ಮೂರನ್ನು ಬರೆಯಿರಿ) ದೇವರ ಮಕ್ಕಳ ದಿವ್ಯವಾದ ಬಿಡುಗಡೆಯು ಇವುಗಳನ್ನು ಒಳಗೊಂಡಿದೆ.

...ಅ) ದುರಾತ್ಮಗಳ ಭಯದಿಂದ ಬಿಡುಗಡೆ

...ಆ) ಸುಳ್ಳು ಮಾತುಗಳಿಂದ ಬಿಡುಗಡೆ

...ಇ) ಪ್ರಜೆಗಳಾದ ನಮ್ಮ ಕರ್ತವ್ಯಗಳಿಂದ ಬಿಡುಗಡೆ

...ಈ) ಮೋಶೆಯ ಕಟ್ಟಳೆಯಿಂದ ಬಿಡುಗಡೆ

...ಉ) ಮನಸ್ಸಿಗೆ ತೋಚಿದವುಗಳನ್ನು ಮಾಡುವುದಕ್ಕಿರುವ ಸ್ವಾತಂತ್ರ್ಯ

**ಉತ್ತರಗಳು**: 8.ಅ) ದುರಾತ್ಮಗಳ ಭಯದಿಂದ ಬಿಡುಗಡೆ ಆ) ಸುಳ್ಳು ಮಾತುಗಳಿದಂ ಬಿಡುಗಡೆ ಈ) ಮೋಶೆಯ ಕಟ್ಟಳೆಯಿಂದ ಬಿಡುಗಡೆ

* * * *

ಕೆಲವು ಜನರು ಗೊಂದಲಕ್ಕೀಡಾಗಿ ಮೋಶೆಯ ಕಟ್ಟಳೆಗಳು ವಿಜ್ಞಾಪಿಸುವ ಪ್ರಕಾರ ಶನಿವಾರವನ್ನು ಪರಿಶುದ್ಧ ದಿನವೆಂದು ಆಚರಿಸಬೇಕೆಂದು ನೆನಸುತ್ತಾರೆ. ಆದರೆ ಯಾವಗ ಯೇಸು ಸತ್ತವರೊಳಗಿಂದ ವಾರದ ಮೊದಲನೆಯ ದಿನದಲ್ಲಿ ಎದ್ದು ಬಂದನೋ, ಶಿಷ್ಯರು ಭಾನುವಾರದಲ್ಲಿ ಕೂಡಿ ಬರುವ ಪದ್ಧತಿಯನ್ನು ಆತನ ಪುನರುತ್ಥಾನದ ನೆನಪಿಗಾಗಿ ಇಟ್ಟುಕೊಂಡಿದ್ದರು.

ಇತರ ಕೆಲಸಗಳಿಂದ ವಿಶ್ರಾಂತಿ ತೆಗೆದುಕೊಳ್ಳಲು ನಾವು ವಾರದಲ್ಲಿ ಒಂದು ದಿನವನ್ನು ಪ್ರತ್ಯೇಕವಾಗಿರಿಸಿ, ದೇವರ ಆಲಯಕ್ಕೆ ಆತನನ್ನು ಆರಾಧಿಸಲು ಹೋಗುತ್ತೇವೆ. ಆದರೆ, ನಾವು ಆತನನ್ನು ಪ್ರೀತಿಸುವುದರಿಂದ ಇದನ್ನು ಮಾಡುತ್ತೇವೆಯೇ ಹೊರತು ಯಾವ ಕಾಯಿದೆಗಳಿಗೆ ಅಧೀನರಾಗಿ ಅಲ್ಲ.

ಪ್ರಕಟನೆ 1:10 ನಾನು ಕರ್ತನ ದಿನದಲ್ಲಿ ದೇವರಾತ್ಮ ವಶನಾಗಿದ್ದೆನು. ಕೊಲಸ್ಸೆಯವರಿಗೆ 2:16 ಹೀಗಿರುವುದರಿಂದ ತಿಂದು ಕುಡಿಯುವ ವಿಷಯದಲ್ಲಿಯೂ ಹಬ್ಬ ಅಮಾವಾಸ್ಯೆ ಸಬ್ಬತು ಎಂಬವುಗಳ ವಿಷಯದಲ್ಲಿಯೂ ನಿಮ್ಮನ್ನು ದೋಷಿಗಳೆಂದು ಯಾರು ಎಣಿಸಬಾರದು.

**ನೀವು ಮಾಡಬೇಕಾದದ್ದು**

9. (ಒಂದನ್ನು ಬರೆಯಿರಿ) ಸತ್ಯವೇದವು ಬೋಧಿಸುವುದೇನಂದರೆ ಒಬ್ಬ ಶಿಷ್ಯನು

...ಅ) ಯಾವ ತರಹದ ಆಹಾರವನ್ನಾದರೂ ತಿನ್ನಬಹುದೆಂದು

...ಆ) ಶಿಷ್ಯರು ಮೋಶೆಯ ಕಟ್ಟಳೆಗೆ ಬದ್ಧರಾಗಿದ್ದಾರೆಂದು

ಉತ್ತರ: 9.ಅ) ಯಾವ ತರಹದ ಆಹಾರವನ್ನಾದರೂ ತಿನ್ನಬಹುದೆಂದು

## ಚಿಂತೆಗಳಿಂದ ಬಿಡುಗಡೆ

ನಿಮ್ಮ ತಂದೆಯು ನಿಮ್ಮನ್ನು ಪ್ರೀತಿಸುತ್ತಾನೆ ಮತ್ತು ನಿಮ್ಮ ಕೊರತೆಗಳನ್ನು ನೀಗಿಸುತ್ತಾನೆ. ಆತನಲ್ಲಿ ನಂಬಿಕೆಯಿಡಿರಿ.

> 1 ಪೇತ್ರ 5:7 ನಿಮ್ಮ ಚಿಂತೆಯನ್ನೆಲ್ಲಾ ಆತನ ಮೇಲೆ ಹಾಕಿರಿ, ಆತನು ನಿಮಗೋಸ್ಕರ ಚಿಂತಿಸುತ್ತಾನೆ.

> ಮತ್ತಾಯ 6:31-33 ಹೀಗಿರುವುದರಿಂದ ಏನು ಊಟ ಮಾಡಬೇಕು, ಏನು ಕುಡಿಯಬೇಕು. ಏನು ಹೊದ್ದುಕೊಳ್ಳಬೇಕು ಎಂದು ಚಿಂತೆ ಮಾಡಬೇಡಿರಿ. ಇವೆಲ್ಲವುಗಳಿಗಾಗಿ ಅಜ್ಞಾನಿಗಳು ತವಕಪಡುತ್ತಾರೆ. ಇದೆಲ್ಲಾ ನಿಮಗೆ ಬೇಕಾಗಿದೆ ಎಂದು ಪರಲೋಕದಲ್ಲಿರುವ ನಿಮ್ಮ ತಂದೆಗೆ ತಿಳಿದಿದೆಯಷ್ಟೆ. ಹೀಗಿರುವುದರಿಂದ, ನೀವು ಮೊದಲು ದೇವರ ರಾಜ್ಯಕ್ಕಾಗಿಯೂ ನೀತಿಗಾಗಿಯೂ ತವಕಪಡಿರಿ. ಇವುಗಳ ಕೂಡ ಅವೆಲ್ಲವೂ ನಿಮಗೆ ದೊರಕುವವು.

### ನೀವು ಮಾಡಬೇಕಾದದ್ದು

10. 1 ಪೇತ್ರ 5:7 ಬಾಯಿಪಾಠ ಮಾಡಿರಿ.

11. ನೀವು ಯಾವುದಕ್ಕಾದರೂ ಚಿಂತಿಸುತ್ತಿದ್ದಿರೋ? ಅದನ್ನು ಪ್ರಾರ್ಥನೆಯ ಮೂಲಕ ಕರ್ತನ ಬಳಿಗೆ ಒಯ್ಯಿರಿ. ಉತ್ತರಿಸಿದ್ದಕ್ಕಾಗಿ ಆತನಿಗೆ ಉಪಕಾರ ಸಲ್ಲಿಸಿರಿ ಮತ್ತು ಚಿಂತೆ ಮಾಡುವುದನ್ನು ನಿಲ್ಲಿಸಿರಿ.

## ಕಾಯಿಲೆಯಿಂದ ಬಿಡುಗಡೆ

ಶ್ರೇಷ್ಠ ವೈದ್ಯನಾಗಿರುವ ಕ್ರಿಸ್ತನು ನಿಮ್ಮ ಉತ್ತಮ ಸ್ನೇಹಿತನಾಗಿದ್ದಾನೆ. ಆತನು ನಿಮ್ಮನ್ನು ಪ್ರೀತಿಸುತ್ತಾನೆ ಮತ್ತು ನಿಮಗೆ ಉತ್ತಮ ಆರೋಗ್ಯ ಇರಬೇಕೆಂದು ಬಯಸುತ್ತಾನೆ. ಆತನು ಭೂಲೋಕದಲ್ಲಿರುವಾಗ ಯಾವ ರೀತಿಯಲ್ಲಿ ಕಾಯಿಲೆಯಿದ್ದವರನ್ನು ವಾಸಿಮಾಡಿದನೋ, ಅದೇ ಪ್ರಕಾರ ಆತನು ಈಗಲೂ

ಪ್ರಾರ್ಥನೆಗೆ ಉತ್ತರವಾಗಿ ಕಾಯಿಲೆಯವರನ್ನು ವಾಸಿ ಮಾಡುವನು. ನೀವು ಕಾಯಿಲೆಯಲ್ಲಿ ಬಿದ್ದಿರುವಾಗ, ಸಭಾಪಾಲಕರು ಮತ್ತು ಸಭೆಯವರು ನಿಮಗಾಗಿ ಪ್ರಾರ್ಥಿಸಬಹುದು. ಅವರು ತಮ್ಮ ಕೈಗಳನ್ನು ನಿಮ್ಮ ಮೇಲೆ ಇಟ್ಟು ದೇವರು ನಿಮ್ಮನ್ನು ಮುಟ್ಟಿ ಗುಣಪಡಿಸಲು ಕೇಳಿಕೊಳ್ಳಬಹುದು. ಇಲ್ಲವೇ ಅವರು ನಿಮಗೆ ಎಣ್ಣೆಯನ್ನು ಹಚ್ಚಬಹುದು; ಈ ಒಂದು ವಿಧಾನದ ಮೂಲಕ ಅವರು ಪವಿತ್ರಾತ್ಮನು ನಿಮ್ಮನ್ನು ವಾಸಿಮಾಡಲು ಶಕ್ತನು ಎಂಬ ನಂಬಿಕೆಯನ್ನು ತೋರ್ಪಡಿಸುತ್ತಾರೆ.

ಮಾರ್ಕ 16:18 ಅವರು ರೋಗಿಗಳ ಮೇಲೆ ಕೈಯಿಟ್ಟರೆ ಇವರಿಗೆ ಗುಣವಾಗುವುದು.

ಯಾಕೋಬ 5:14,15 ನಿಮ್ಮಲ್ಲಿ ಅಸ್ವಸ್ಥನಾಗಿರುವವನು ಇದ್ದಾನೋ? ಅವನು, ಸಭೆಯ ಹಿರಿಯರನ್ನು ಕರೆಕಳುಹಿಸಲಿ. ಅವರು ಕರ್ತನ ಹೆಸರಿನಿಂದ ಅವನಿಗೆ ಎಣ್ಣೆ ಹಚ್ಚಿ ಅವನಿಗೋಸ್ಕರ ದೇವರನ್ನು ಪ್ರಾರ್ಥಿಸಲಿ. ನಂಬಿಕೆಯಿಂದ ಮಾಡಿದ ಪ್ರಾರ್ಥನೆಯು ರೋಗಿಯನ್ನು ರಕ್ಷಿಸುವುದು. ಕರ್ತನು ಅವನನ್ನು ಎಬ್ಬಿಸುವವನು ಮತ್ತು ಪಾಪ ಮಾಡಿದವನಾಗಿದ್ದರೆ ಅದು ಪರಿಹಾರವಾಗುವುದು.





**ನೀವು ಮಾಡಬೇಕಾದದ್ದು**

12. ವಾಸಿಯಾಗಲು ಬಯಸುವಿರೋ? ನಿಮ್ಮ ಸಭಾಪಾಲಕರನ್ನು ನಿಮಗಾಗಿ ಪ್ರಾರ್ಥಿಸಲು ಕೇಳಿಕೊಳ್ಳಿರಿ. ನೀವು ಪತ್ರವ್ಯವಹಾರದ ಮೂಲಕ ಅಭ್ಯಾಸ ಮಾಡುತ್ತಿದ್ದರೆ, ಶಾಲೆಯಲ್ಲಿರುವ ಅಧ್ಯಾಪಕ ವರ್ಗದವರು ನಿಮಗಾಗಿ ಪ್ರಾರ್ಥಿಸಲು ಸಂತೋಷ ಪಡುತ್ತಾರೆ. ನೀವು ನಿಮ್ಮ ಉತ್ತರ ಪತ್ರಿಕೆಯನ್ನು ಕಳುಹಿಸುವಾಗ ನಿಮ್ಮ ಕೊರತೆಗಳನ್ನು ಅವರಿಗೆ ಬರೆಯಿರಿ.

## ಭವಿಷ್ಯತ್ತಿನಲ್ಲಿ ಬಿಡುಗಡೆ

ಈಗ ನಿಮಗಿರುವ ಬಿಡುಗಡೆಯು ಆಶ್ಚರ್ಯಕರವಾದದ್ದು, ಆದರೆ ಯಾವಾಗ ಶ್ರೇಷ್ಠ ವಿಮೋಚಕನಾದ ಯೇಸು ತನ್ನ ಜನರಿಗೋಸ್ಕರ ಭೂಲೋಕಕ್ಕೆ ಬರುತ್ತಾನೋ, ಆಗ ಅದ್ಭುತವಾದ ಬಿಡುಗಡೆಯ ಸಂಪೂರ್ಣತ್ವವನ್ನು ಆತನ ಮಕ್ಕಳಾದ ನೀವು ಅರಿತುಕೊಳ್ಳುವಿರಿ. ಆತನು ನಿಮ್ಮ ದೇಹವನ್ನು ಮಾರ್ಪಾಡಿಸಿ ತನ್ನ ದೇಹದಂತೆಯೇ ಒಂದು ಪರಿಪೂರ್ಣವಾದ ದೇಹವನ್ನಾಗಿ ಮಾಡುವನು ಮತ್ತು ನಿಮ್ಮನ್ನು ಸ್ವರ್ಗಲೋಕದ ನಿಮ್ಮ ಮನೆಗೆ ಒಯ್ಯುವನು. ಕಾಲಕ್ರಮೇಣ ಕ್ರಿಸ್ತನು ಭೂಲೋಕವನ್ನು ಪಾಪದ ಎಲ್ಲಾ ಇರುವಿಕೆಯಿಂದ ಮತ್ತು ಅದರ ಪರಿಣಾಮಗಳಿಂದ ಬಿಡುಗಡೆ ಮಾಡುವನು.

> ಪ್ರಕಟನೆ 21:4 ಅವರ ಕಣ್ಣೀರನ್ನೆಲ್ಲಾ ಒರೆಸಿಬಿಡುವನು. ಇನ್ನು ಮರಣವಿರುವುದಿಲ್ಲ, ಇನ್ನು ದುಃಖವಾಗಲಿ, ಗೋಳಾಟವಾಗಲಿ, ಕಷ್ಟವಾಗಲಿ ಇರುವುದಿಲ್ಲ, ಮೊದಲಿದ್ದದ್ದೆಲ್ಲಾ ಇಲ್ಲದೆ ಹೋಯಿತು.

> ರೋಮಾಪುರದವರಿಗೆ 8:21 ಅದಕ್ಕೊಂದು ನಿರೀಕ್ಷೆಯುಂಟು, ಏನಂದರೆ ಆ ಜಗತ್ತು ಕೂಡ ನಾಶದ ವಶದಿಂದ ಬಿಡುಗಡೆಯಾಗಿ ದೇವರ ಮಕ್ಕಳ ಮಹಿಮೆಯುಳ್ಳ ವಿಮೋಚನೆಯಲ್ಲಿ ಪಾಲು ಹೊಂದುವದೇ.

### ನೀವು ಮಾಡಬೇಕಾದದ್ದು

13. ಪ್ರಕಟನೆ 21:4 ನಾಲ್ಕು ಬಾರಿ ಓದಿರಿ ಮತ್ತು ಅದರಲ್ಲಿರುವ ಸಂದೇಶಕ್ಕಾಗಿ ದೇವರಿಗೆ ಸ್ತೋತ್ರ ಸಲ್ಲಿಸಿರಿ.

## ನಿಮ್ಮ ಬಿಡುಗಡೆಯನ್ನು ಉಳಿಸಿಕೊಳ್ಳುವುದು

ಕ್ರಿಸ್ತನು ಬರುವ ತನಕ, ಸೈತಾನನ ವಿರುದ್ಧ ನಾವು ಇನ್ನೂ ಹೋರಾಡುತ್ತಿರಬೇಕಾಗುತ್ತದೆ. ಆಕರ್ಷಣೆ ಮತ್ತು ಶೋಧನೆಗಳು ಇರುತ್ತವೆ. ಆದರೆ ನಾವು ನಮ್ಮ ಸ್ವಾತಂತ್ರ್ಯವನ್ನು ಬಿಟ್ಟುಬಿಡಬಾರದು.

ಗಲಾತ್ಯದವರಿಗೆ 5:1 ಕ್ರಿಸ್ತನು ನಮ್ಮನ್ನು ಸ್ವತಂತ್ರದಲ್ಲಿರಿಸಬೇಕೆಂದು ನಮಗೆ ಬಿಡುಗಡೆ ಮಾಡಿದನು. ಅದರಲ್ಲಿ ಸ್ಥಿರವಾಗಿ ನಿಲ್ಲಿರಿ, ದಾಸತ್ವದ ನೊಗದಲ್ಲಿ ತಿರಿಗಿ ಸಿಕ್ಕಿಕೊಳ್ಳಬೇಡಿರಿ.

ಕರ್ತನಾದ ಯೇಸುಕ್ರಿಸ್ತನಲ್ಲಿ ಹೊಸ ಜೀವಿತ ಮತ್ತು ಬಿಡುಗಡೆಯಿದೆಯೆಂಬುದನ್ನು ಎಂದಿಗೂ ಮರೆಯದಿರಿ. ಅವುಗಳು ನೀವು ಒಳ್ಳೆಯವರಾಗಲು ಪ್ರಯತ್ನಿಸುವುದರ ಮೇಲೆ ಅವಲಂಬಿಸಿರುವುದಿಲ್ಲ. ಆದರೆ ಆತನ ಸಾನಿಧ್ಯ ಮತ್ತು ನಿಮ್ಮಲ್ಲಿರುವ ಆತನ ಶಕ್ತಿಯ ಮೇಲೆ ಆಧಾರವಾಗಿವೆ. ಕ್ರಿಸ್ತನಂತಹ ಜೀವಿತವು ಕಟ್ಟುಪಾಡುಗಳನ್ನು ಪಾಲಿಸುವುದರಿಂದ ಇಲ್ಲ. ಆದರೆ "ಕ್ರಿಸ್ತನೇ ನಿಮ್ಮಲ್ಲಿದ್ದು ಪ್ರಭಾವದ ನಿರೀಕ್ಷೆಗೆ ಆಧಾರನಾಗಿದ್ದಾನೆ"

ಕ್ರಿಸ್ತನಲ್ಲಿ ನೀವು ಅದ್ಭುತವಾದ ಹೊಸ ಜೀವಿತವನ್ನು ಅಂದರೆ ನಿತ್ಯ ಜೀವವನ್ನು ದೇವರ ಮಕ್ಕಳ ಅದ್ಭುತವಾದ ಬಿಡುಗಡೆಯೊಂದಿಗೆ ಕಂಡುಕೊಂಡಿದ್ದೀರಿ. ಅದನ್ನು ಎಲ್ಲಾ ವಿಷಯಗಳಿಗಿಂತ ಅಮೂಲ್ಯವಾಗಿರಿಸಿಕೊಳ್ಳಿ, ವರುಷಗಳು ದಾಟಿದಂತೆ ಮತ್ತು ಮುಂಬರುವ ವರುಷಗಳಲ್ಲಿ ನೀವು ಅದರಲ್ಲಿ ಸಂತೋಷಿಸುವಿರಿ.

ಗಲಾತ್ಯದವರಿಗೆ 2:20 ಇನ್ನು ಜೀವಿಸುವವನು ನಾನಲ್ಲ, ಕ್ರಿಸ್ತನು ನನ್ನಲ್ಲಿ ಜೀವಿಸುತ್ತಾನೆ. ಈಗ ಶರೀರದಲ್ಲಿರುವ ನಾನು ಜೀವಿಸುವುದು ಹೇಗಂದರೆ, ದೇವಕುಮಾರನ ಮೇಲಣ ನಂಬಿಕೆಯಲ್ಲಿಯೇ, ಆತನು ನನ್ನನ್ನು ಪ್ರೀತಿಸಿ ನನಗೋಸ್ಕರ ತನ್ನನ್ನು ಒಪ್ಪಿಸಿಬಿಟ್ಟನು.

## ನೀವು ಮಾಡಬೇಕಾದದ್ದು

14. (ಒಂದನ್ನು ಬರೆಯಿರಿ) ಕ್ರಿಸ್ತನಂತಿರುವ ನಿಮ್ಮ ಜೀವಿತವು ಇದನ್ನು ಅವಲಂಬಿಸಿದೆ.

...ಅ) ಕಟ್ಟುಪಾಡುಗಳನ್ನು ಪಾಲಿಸುವುದರಿಂದ

...ಆ) ನಿಮ್ಮಲ್ಲಿರುವ ಕ್ರಿಸ್ತನ ಸಾನಿಧ್ಯವು

...ಇ) ಒಳ್ಳೆಯವರಾಗಲು ನೀವು ಪಡುವ ಪರಿಶ್ರಮ

15. 2 ಕೊರಿಂಥದವರಿಗೆ 5:17 ಮತ್ತು ಗಲಾತ್ಯದವರಿಗೆ 2:20 ಬಾಯಿಪಾಠ ಮಾಡಿರಿ.

**ಉತ್ತರ** 14: ಅ) ನಿಮ್ಮಲ್ಲಿರುವ ಕ್ರಿಸ್ತನ ಸಾನಿಧ್ಯವು

ನೀವು ಈಗ ಅಂತಿಮ ಪ್ರಶ್ನೆಗಳನ್ನು ಉತ್ತರಿಸಲು ಸಿದ್ಧರಾಗಿದ್ದೀರಿ. ಅದನ್ನು ನಮ್ಮ ಕಚೇರಿಗೆ ಕಳುಹಿಸಿರಿ ಮತ್ತು ನಿಮ್ಮ ಯೋಗ್ಯತಾ ಪತ್ರವನ್ನು ಪಡೆದುಕೊಳ್ಳಿರಿ.

ಐಸಿಐ ಯೂನಿವರ್ಸಿಟಿ
(ಇಂಟರ್‌ನೇಷನಲ್ ಕರೆಸ್ಪಾಂಡೆನ್ಸ್ ಇನ್‌ಸ್ಟಿಟ್ಯೂಟ್)
ಪೋಸ್ಟ್ ಬಾಕ್ಸ್ - 5036
ಬೆಂಗಳೂರು - 560 001